Indian Streams Research Journal
ISSN 2230-7850
Impact Factor : 3.1560(UIF)
Volume - 5 | Issue - 10 | Nov - 2015

# "ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯಲ್ಲಿ ಸ್ತ್ರೀ ತೋಳಲಾಟಗಳು"

ಶ್ರೀದೇವಿ. ವಾಯ್.ಎನ್.[1] , ಡಾ.ವಿಕ್ರಮವಿಸಾಜಿ[2]
[1]ಪಿಎಚ್‌ಡಿ ಸಂಶೋಧನಾರ್ಥಿ.
[೨] ಮಾರ್ಗದರ್ಶಕರು

ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿಯು ಮುಖ್ಯವಾಗಿ ಸಿಂಗಾರೆವ್ವಳ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು ಸ್ತ್ರೀ ತಲ್ಲಣಗಳನ್ನು, ನೋವುಗಳನ್ನು ಚರ್ಚಿಸಿರುವಂಥದ್ದು. ಇಲ್ಲಿ ಸಿಂಗಾರೆವ್ವ ಸಮಗ್ರ ಸ್ತ್ರೀತ್ವದ ಮುಖವಾಣಿ. ಅವಳು ಪ್ರತಿನಿಧಿಸುವ ಪಾತ್ರ ಲೋಕದ ಹೆಣ್ಣುಗಳ ಹತಾಶೆ, ನೋವು, ಬಯಕೆ ಮುಂತಾದ ಸ್ತ್ರೀ ಜೀವನದ ಜೀವನಾಡಿಯಾದ ಸಂಗತಿಗಳಿಗೆ ಸಂಬಂಧಪಟ್ಟಿರುವಂಥದ್ದು.

ಈ ಕಾದಂಬರಿ ಓದಿದ ನಂತರ 'ಸಿಂಗಾರೆವ್ವ' ಎಂಬ ಪದದಲ್ಲಿ ಬರುವ 'ಸಿಂಗಾರ' ಎಂಬ ಪದವು ನನ್ನ ಗಮನ ಸೆಳೆದಿದ್ದು. ಈ ಪದವು ಒಂದು ವ್ಯಕ್ತಿಯ ವ್ಯಕ್ತಿತ್ವದ ಗೂಢತೆಯನ್ನು ವ್ಯಕ್ತಪಡಿಸುವಂತಹ ಅರ್ಥವನ್ನು ಒಳಗೊಂಡಿರುವುದೆಂದಿನಿಸಿತು. ಮನುಷ್ಯ ಅದು ಸ್ತ್ರೀಯಾಗಲಿ ಪುರುಷನಾಗಲಿ, ತಮ್ಮ ನೋವುಗಳನ್ನು, ತಮ್ಮ ಸುಳ್ಳುಗಳನ್ನು ಮರೆಮಾಚಲು ಹಾಕಿಕೊಂಡ ಇನ್ನೊಂದು ಚೆಹೆರೆಯ ಸಾಂಕೇತಿಕವಾಗಿ ನಿಲ್ಲುತ್ತದೆ ಎಂದೆನಿಸುತ್ತದೆ. ಮನುಷ್ಯನಿಗೆ ತನ್ನ ಸ್ವಂತ ವ್ಯಕ್ತಿತ್ವವನ್ನು ಬದಿಗೊತ್ತಿ ಸಾಮಾಜಿಕ ಪ್ರತಿಷ್ಟೆಗೋಸ್ಕರ ಸುಳ್ಳು ಚೆಹೆರೆಯನ್ನು ಧರಿಸಿ ಅದೆಷ್ಟು ಜನರು ಬದುಕುವ ಅನಿವಾರ್ಯತೆಯನ್ನು ಅವಗಾಹಿಸಿಕೊಂಡಿರುವುದು ನಮ್ಮ ಸಾಮಾಜಿಕ ವ್ಯವಸ್ಥೆಯ ಸೂಕ್ಷ್ಮ ಅವಲೋಕನದಿಂದ ತಿಳಿಯುವಂಥದ್ದು.




ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅಮಾಯಕವಾಗಿ ಸಿಲುಕಿಕೊಂಡ ಸ್ತ್ರೀಯರು ತಮ್ಮ ನೋವುಗಳನ್ನು ನುಂಗಿಕೊಂಡು ಅರಮನೆಯೆಂಬ ಶ್ರೀಮಂತಿಕೆಯ ಸೂಪ್ತ ರೂಪಕಗಳ ಸೊಪ್ಪತ್ತಿನಲ್ಲಿ ನೋವನ್ನು ತೋರಿಸದೆ ಆನಂದದ ಚಹರೆಯನ್ನು ತೊಟ್ಟು ಸಮಾಜದಲ್ಲಿ ಬದುಕುತಿದ್ದಾರೆ. ಇಲ್ಲಿ ಸಿಂಗಾರೆವ್ವ ನಮ್ಮ ಸಮಾಜ ಹೇರಿದ ಇಂಥ ನಿಗೂಢ ಸೂಕ್ಷ್ಮಗಳನ್ನು ನಗುವಿನಲ್ಲಿ ನುಂಗಿಕೊಂಡವಳು. ಸಿಂಗಾರಕ್ಕಾಗಿ ಹೆಣ್ಣನ್ನು ಬಳಸಿಕೊಳ್ಳುವಾಗ ನಾವು ಅವಳನ್ನು ಕಂಡ ಪರಿ ಯಾವುದು? ಪುರುಷ ಕೇಂದ್ರೀತ ವ್ಯವಸ್ಥೆಯಲ್ಲಿ ಅವಳನ್ನು ಕೇವಲ ವ್ಯಕ್ತಿಯಾಗಿ ಕಂಡಿದ್ದೇವೆಯೋ ಅಥವಾ ಅವಳನ್ನು ಮನುಷ್ಯ ಜನ್ಮದ ಆಚೆ ತಳ್ಳಿ ಅವಳಿಗೆ ಬೇರೆಯದೇ ಆದ ಅಸ್ತಿತ್ವ ಕಲ್ಪಿಸಿದ್ದೇವೆಯೋ ಎನ್ನುವಂತ ಚರ್ಚೆಯನ್ನು ಮುಖ್ಯವಾಗಿ ಈ ಕಾದಂಬರಿ ನಿಭಾಯಿಸಿದೆ. ಒಂದು ಹೆಣ್ಣಿಗೆ ಶ್ರೀಮಂತಿಕೆಯು ಮಾತ್ರ ಸಾಕೆ? ಮತ್ತೆ ಇದೊಂದೆ ಸ್ತ್ರೀ ಸಮಸ್ಯೆಯಲ್ಲ. ಕೆಲವು ಗೋಚರಿಸಿದರೆ ಮತ್ತೆ ಕೆಲವು ಬಯಲಿಗೆ ಬಾರದೆ, ಸ್ತ್ರೀಯನ್ನು ಬಲಿತೆಗೆದುಕೊಂಡು ಅಲ್ಲೇ ಕರಗಿ ಹೋಗಿ ಬಿಡುತ್ತವೆ. ಸ್ತ್ರೀಯು ಹುಟ್ಟಿನಿಂದ ಸಾವಿನವರೆಗೆ ಮಗಳು, ತಂಗಿ, ಅಕ್ಕ, ಹೆಂಡತಿ, ತಾಯಿ, ಅತ್ತೆ, ಅಜ್ಜಿ, ಗೆಳತಿ, ಪ್ರೇಮಿ, ಹೀಗೆ ಹತ್ತುಹಲವು ಸಂಬಂಧಗಳನ್ನು ತನಗೆ ಇಷ್ಟವಿದ್ದರು, ಇಲ್ಲದಿದ್ದರೂನಿ ಭಾಯಸಿಲೇಬೇಕು. ಇವಳು ಮಗಳಾಗಿದ್ದಾಗ ತಂದೆ ತಾಯಿಯ ಪ್ರೀತಿ ಬಯಸಿದರೆ, ಮದುವೆಯಾದನಂತರ ಗಂಡನ ಪ್ರೀತಿ ಬಯಸುತ್ತಾಳೆ. ಅದೇ ಮಕ್ಕಳಾದಮೇಲೆ– ಮಕ್ಕಳ ಪ್ರೀತಿಯನ್ನು ಪಡೆಯುವ ಕಡೆಗೆಯೇ ಅವಳ ಪಯಣಿಸುತ್ತಾಳೆ.

ಇಲ್ಲಿ ಮೇಲಿನ ನೋಟಕ್ಕೆ ಮಾತ್ರ ಸ್ತ್ರೀ ಸಮಸ್ಯೆಗಳೆಂದು ಹೇಳಲಾಗಿರುವ ಬಾಲ್ಯವಿವಾಹ, ವಿದವೆಯರ ಸಮಸ್ಯೆ, ವರದಕ್ಷಿಣೆ ಸಮಸ್ಯೆ, ಅತ್ಯಾಚಾರ, ಲೈಂಗಿಕ ದೌರ್ಜನ್ಯ, , ಗಂಡನಿಂದ ತಿರಸ್ಕೃತವಾದವಳು, ಮುಖ್ಯವಾಗಿಇವುಗಳನ್ನು ಹೇಳಲಾಗುತ್ತದೆ. ಈ ಎಲ್ಲಾ ಸಮಸ್ಯೆಳಲ್ಲಿ ಕೆಲವೊಂದು ಸಮಸ್ಯೆಗಳನ್ನು ಕೆಲವು ಸ್ತ್ರೀಯರು ಅನುಭವಿಸುತ್ತಿರುತ್ತಾರೆ. ಆದರೆ ಈ ಕಾದಂಬರಿಯಲ್ಲಿ ಬರುವ ಸಿಂಗಾರೆವ್ವಳು ಅನುಭವಿಸಿದ ನೋವುಗಳು ಒಂದೇ ಅಲ್ಲ. ಅವಳು ಇಲ್ಲಿ ಜನ್ಮವಿತ್ತ ಮನೆಯಿಂದ ಸಾಯುವವರೆಗೆ ಇಲ್ಲಿ ನೋವಿಗೆ ಈಡಾಗಿದ್ದಾಳೆ. ಇಲ್ಲಿ ಅವಳಿಗೆ ಕೇವಲ ಏಖಮುಖಿ ನೋವು ಬಾಧಿಸದೇ

ಸಮಾಜದಲ್ಲಿ ಸ್ತ್ರೀಗೆಂದೇ ಗೊತ್ತು ಪಡಿಸಿದ ನೋವುಗಳೆಲ್ಲವನ್ನು ಅವಳಿಲ್ಲಿ ನುಂಗಿದ್ದಾಳೆ.

ಸಿಂಗಾರೆವ್ವಳ ತಂದೆಯ ಶ್ರೀಮಂತಿಕೆಯ ಹುಚ್ಚು, ತಾಯಿಯ ಮೌನಿ, ಗಂಡನ ಸ್ತ್ರೀಲಂಪಟತನವು ಸಿಂಗಾರೆವ್ವಳ ಜೀವನವೆ ಹಾಳುಮಾಡುತ್ತದೆ6696. ಅವಳಿಗೆ ಶ್ರೀ ರಕ್ಷೆಯಾಗಬೇಕಿದ್ದ ಪ್ರಾಥಮಿಕ ಪಾತ್ರಗಳೆಲ್ಲವು ಅವಳ ಪಾಲಿಗೆ ಇಲ್ಲಿ ಇಲ್ಲದಾಗಿವೆ. ಮರ್‍ಯಾನ ಬಲತ್ಕಾರ, ಸಿಂಗಾರೆವ್ವಳ ಬದುಕೆ ಅಲ್ಲೋಲಕಲ್ಲೋಲನ್ನಾಗಿ ಮಾಡಿಬಿಡುತ್ತದೆ. ದುಡ್ಡಿನ ಆಸೆಯಿಂದ ಅದೆಷ್ಟೋ ಹೆಣ್ಣುಹೆತ್ತ ತಂದೆತಾಯಿಯರು ತಮ್ಮ ಮಗಳ ಒಪ್ಪಗೆಯನ್ನು ಕೇಳದೆ ವಿವಾಹ ಮಾಡಿಬಿಡುತ್ತಾರೆ, ಮತ್ತೆ ಕೆಲವರು ಹುಡುಗನು ಶ್ರೀಮಂತನಿದ್ದರೆ ಸಾಕು, ಮಗಳ ಮತ್ತು ಹುಡುಗನ ವಯಸ್ಸಿನ ಅಂತರವನ್ನು ನೋಡುವುದಿಲ್ಲ. ತಾವು ಹೆತ್ತ ಮಗಳನ್ನು ಮದುವೆ ಮಾಡಿದರೆ ಸಾಕು ಎಂದು ವಿವಾಹ ಮಾಡಿಬಿಡುತ್ತಾರೆ. ಇದರಿಂದ ಸಮಸ್ಯೆಗಳು ಬರಬಹುದು ಎಂದು ಚಿಂತಿಸುವ ತಂದೆ–ತಾಯಿಗಳಿರುವುದು ಕಡಿಮಿಯೇ.

ಬಡತನದಲ್ಲಿರುವ ಕುಟುಂಬಗಳಲ್ಲಿ ಇಂತಹ ಘಟನೆಗಳು ಜರಗುತ್ತಲೇ ಇರುತ್ತವೆ. ಶ್ರೀಮಂತಿಕೆಯ ಕುಟುಂಬದಲ್ಲಿ ಕೆಲವು ಕಡೆ ಇಂತಹ ವಿವಾಹಗಳು ಕೂಡ ಅಗಿರುತ್ತವೆ. ಆದರೆ ತಾನು ಶ್ರೀಮಂತನಿದ್ದೂ ಕೂಡ ತನ್ನ ಒಂದೆ ಒಂದು ಮಗಳನ್ನು ಆಸ್ತಿಯ ದುರಾಸೆಯಿಂದ ಸತ್ತ ಹುಡುಗನ ಜೊತೆಗೆ ವಿವಾಹ ಮಾಡುವ ತಂದೆಯರು ಕೂಡ ಇರುವರು ಎಂದು ತಿಳಿದುಬಂದರೆ ನಮ್ಮ ಮನಸ್ಸಿನ ಮೇಲೆ ಏನು ಪರಿಣಾಮವಾಗಬಹುದು ಯೋಚಿಸಿ. ಇಂತಹ ಅನಾಹುತವಾದದ್ದು ಸಿಂಗಾರೆವ್ವಳ ಬಾಳಿನಲ್ಲಿ.

ಈ ಕಾದಂಬರಿಯ ಕೇಂದ್ರಪಾತ್ರವೆನಿಸುವ ಸಿಂಗಾರೆವ್ವಳ ಸುತ್ತಲೂ ಈ ಕತೆ ಹೆಣೆದುಕೊಂಡಿದೆ. ಸಿಂಗಾರೆವ್ವಳ ಬದುಕಿನುದ್ದಕ್ಕೂ ಜೊತೆಯೆಲ್ಲಿಯೆ ಇದ್ದ ಶೀನಿಂಗವ್ವಳು ಬರಹಗಾರರಿಗೆ ಅವಳ ಜೀವನವನ್ನು ಬಿಚ್ಚಿಡುತ್ತಾಳೆ.

ಸಿಂಗಾರೆವ್ವ ನಂದಗಾವಿಯ ಪಂಡರಿಗೌಡನ ಒಬ್ಬಳೆ ಮಗಳು. ಪಂಡರಿಗೌಡನಿಗೆ ನಾಲ್ಕು ಜನ ಹೆಂಡತಿಯರು ಅವರಲ್ಲಿ ನಿಗಂವ್ವಳಿಗೆ ಹುಟ್ಟಿದವಳೆ ಈ ಸಿಂಗಾರೆವ್ವ. ಸ್ವಂತ ತಂದೆಯಿಂದಲೆ ನೋವುಂಡು, ಗಂಡನಿಂದಲೂ ಯಾವ ಸುಖವನ್ನೂ ಪಡೆಯದೆ ಪ್ರಾಣಬಿಟ್ಟವಳು ಸಿಂಗಾರೆವ್ವ. ಶೀನಿಂಗಿ ಹೇಳುವಂತೆ " ನಮ್ಮ ಸಿಂಗಾರೆವ್ವಳ ಅಪ್ಪ ಭಾಳ ಕೊಳಕಿದ್ದ, ಕೊಳಕ ಅಂದರೆ ಅಂತಿಂತಾ ಕೊಳಕಂತ ಅಂದೀ ಮತ್ತ ಅಸಮಾನ ಕೊಳಕ, ಮಕ್ಕಳನ್ನು ಮಾರಿಕೊಳ್ಳುವಂತ.. ಕೊಳಕ". ಎಂಬ ಮಾತನ್ನು ಗಮನಿಸಿದರೆ ಪಂಡಿರಗೌಡನ ವ್ಯಕ್ತಿತ್ವವು ಅದ್ಯಾವ ಪರಿಯಲ್ಲಿದ್ದೀತು.

ಪಂಡರಿಗೌಡನು ಆಸ್ತಿಯ ಆಸೆಗಾಗಿ ತನ್ನ ತಂಗಿಯ ಮಗನಿಗೆ ಸಿಂಗಾರೆವ್ವಳನ್ನು ವಿವಾಹ ಮಾಡುತ್ತಾನೆ. ಆದರೆ ವಿಹಾದ ಸಮಯದದಲ್ಲಿಯೇ ಹುಡುಗನು ಪ್ರಾಣ ಬಿಟ್ಟಿರುತ್ತಾನೆ. ಇದನ್ನು ಮುಚ್ಚಿಟ್ಟು ವಿವಾಹ ಕೈಗೊಳ್ಳುತ್ತಾನೆ. ಏಕೆಂದರೆ ಹುಡುಗ ಸತ್ತನಂತರ ಹುಡುಗನ ಸಮಸ್ತ ಆಸ್ತಿ ತನ್ನ ಮಗಳಿಗೆ ದೊರೆಯುವುದು, ಮಗಳಿಗೆ ದೊರೆತರೆ ತನಗೂ ದೊರೆತಂತೆ ಎಂದು ಯೋಚಿಸಿ ಇಂತಹ ಹೇಯ ಕೃತ್ಯವನ್ನೆಸುಗುತ್ತಾನೆ.

ಮುಂದಾದರು ತನ್ನ ಮಗಳಿಗೆ ಒಳ್ಳೆಯದನ್ನುಮಾಡುತ್ತಾನೆಯೆ? ಇಲ್ಲ. ಯಾಕೆಂದರೆ ತನ್ನ ಮಗಳಿಗೆ ಎರಡನೆ ವಿವಾಹವನ್ನು ಶ್ರೀಮಂತನಾದ ಶಿವಾಪುರದ ಅಪ್ಪಾಸಾಹೇಬ್ ದೇಸಾಯಿಯೊಂದಿಗೆ ಮಾಡುತ್ತಾನೆ. ಈ ಮರುಮದುವೆಯನ್ನು ಮಾಡುವಾಗಲೂ ಕೂಡ ಸಿಂಗಾರೆವ್ವಳ ಒಪ್ಪಿಗೆಯನ್ನು ಪಡೆಯುವುದೇ ಇಲ್ಲ. ಕಾರಣ ಪುರುಷ ಪ್ರಧಾನ ಸಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರ ಒಪ್ಪಗೆಯನ್ನು ಪಡೆಯಬೇಕೆಂಬ ನಿಯಮವಿಲ್ಲವಲ್ಲ ಅದಕ್ಕೆ.

ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ಇಂತಹ ನಿಮಗಳಿಗೇನು ಕಡಿಮೆಯಿಲ್ಲ. ಶಿಕ್ಷಣ ಪಡೆಯುವುದು, ವಿವಾಹ, ಉದ್ಯೋಗ ಕೈಗೊಳ್ಳುವಲ್ಲಿ ಮಗು ಹೆರುವದು, ಗಂಡನ ಜೊತೆ ಬಾಳುವುದು, ಇವುಗಳಲ್ಲಿ ಯಾವುದಕ್ಕೂ ಸ್ತ್ರೀ ಸ್ವಂತಿಕೆಯೆಂಬುವುದೆ ಇಲ್ಲ. ತನ್ನ ಇಚ್ಛೆಯೆಂತೆ ಬದುಕುವ ಅಧಿಕಾರ ಸ್ತ್ರೀಯರಿಗೆ ಇನ್ನು ಇಲ್ಲ. ಇದನ್ನೆ ಶೀನಿಂಗಿ "ಮಾಡ್ಕೋತೀನಿ, ಬಿಡ್ತೀನಿ ಅಂತ ಹೇಳಾಕ ಹೆಂಗಸರಿಗೆ ಅಧಿಕಾರ ಎಲ್ಲೀದಪ್ಪ? ಅಷ್ಟಾಗಿ ಗಂಡಸರು ಇವರ ಮನಿಸಿನಾಗ ಏನೈತಿ ಅಂತ ಕೇಳಿದರಲ್ಲೇನ ಹೇಳೋದ? ಸಿಂಗಾರೆವ್ವನ ಸೊಭಾವನೂ ಹಂಗ ಅಂತಿಟ್ಟ, ಮೊದಲನೆ ಮದ್ಯಾಗ ಬಾಯಿ ಕಳಕೊಂಡ್ಡಿದ್ದಳು ಹೆಚ್ಚು ಮಾತನಾಡಲಿಲ್ಲ"ಎಂದು ಹೇಳುವ ಇವಳ ಮಾತಿನಲ್ಲಿ ಸತ್ಯಾಂಶವಿದೆ. ಹಲವು ಕಡೆ ಸ್ತ್ರೀಯರಿಗೆ ಆಗುವ ಅನ್ಯಾಯಗಳನ್ನು ಪ್ರಶ್ನೆಮಾಡದೆ ಅನುಭವಿಸುತ್ತಲೆ ಇರುವರು. ಒಂದು ವೇಳೆ

ಪ್ರಶ್ನೇ ಮಾಡಿದರೆ ಆ ಸ್ತ್ರೀಯನ್ನು ಅನುಮಾನಿಸಿ ನೋಡುವುದು ನಮ್ಮ ಸಮಾಜ, ಸ್ತ್ರೀ ಪ್ರಶ್ನೆ ಮಾಡಿದರೆ, ಕಡಿಮೆ ಅಂದರೆ ಏನಾಗಬಹುದು ವಿವಾಹ ವಿಚ್ಛೆದನೆಯಾಗಬಹುದು ಇಲ್ಲವೆ ಅವಳ ಕೊಲೆಯಾಗಬಹುದು ಇಷ್ಟೆ ಅಲ್ಲವೆ?.

ಹೆಣ್ಣು ವಿವಾಹವಾದ ನಂತರ ಗಂಡನ ಮನೆಗೆ ಬರುವುದು ಬದುಕನ್ನು ಕಟ್ಟಿಕೊಳ್ಳುವ ಸಲುವಾಗಿ, ಆದರೆ ಅವಳ ಗಂಡನಿಂದಲೆ ಅವಳ ಬದುಕು ನರಕವಾದರೆ ಸ್ತ್ರೀ ಮಾಡುವುದಾದರು ಏನು? ಗಂಡನ ಜೊತೆಯಿದ್ದರು ನೋವೆ, ಗಂಡನನ್ನು ತೊರೆದು ಬಂದರು ಸಮಾಜ ಅವಳನ್ನು ಬದುಕಲು ಬಿಡುವುದಿಲ್ಲ. ಒಂಟಿ ಹೆಣ್ಣು, ಗಂಡಬಿಟ್ಟವಳು ಸಮಾಜದಲ್ಲಿ ಬದುಕಿದರೆ ಅವಳನ್ನು ಹೆಚ್ಚಾಗಿ ಅನೈತಿಕಳಂತೆ ಕಾಣುವುದು ನಮ್ಮ ಸಮಾಜ. ಪುರುಷನಿಗೆ ಹಲವು ಸ್ವತಂತ್ರಗಳಿವೆ, ಆದರೆ ಸ್ತ್ರೀಯರಿಗೆ ಹೆಣ್ಣಿನ ಬಯಕೆಗಳನ್ನು ಪೂರೈಸಿಕೊಳ್ಳುವ ಒಂದು ಸ್ವತಂತ್ರವಾದರು ಇದೆಯೆ? ಸ್ತ್ರೀಯರಿಗೆ ಕಾನೂನಾತ್ಮಕವಾಗಿ ಕೆಲವು ಸೌಲಭ್ಯಗಳು ದೊರೆತರು, ಸಾಮಾಜಿಕವಾಗಿ ಸ್ತ್ರೀಯರಿಗೆ ಯಾವುದೆ ನ್ಯಾಯ ಸಿಕ್ಕಿಲ್ಲ.

ಸ್ತ್ರೀಯರು ತನ್ನ ಸಮಾಜ ರೂಪಿಸಿದ ಪದ್ಧತಿಗಳನ್ನು ಮೀರಿ ತನ್ನ ಬಯಕೆಗಳನ್ನು ಪೂರೈಸಿಕೊಂಡರೆ ಆಂತಹ ಸ್ತ್ರೀಯನ್ನು ಅನೈತಿಕಳೆಂದೆ ಪರಿಗಣಿಸುವುದು ಸಮಾಜ. ಯಾಕೆ ಸ್ತ್ರೀಯರಿಗೂ ಬಯಕೆಗಳು ಇರುವುದಿಲ್ಲವೆ? ಗಂಡನಿಂದ ಪ್ರೀತಿ

ಬಯಸುವುದು ತಪ್ಪೆ? ತಾನು ತಾಯಿಯಾಗುವ ಬಯಕೆ ಹೊಂದಿರುವುದೆ ತಪ್ಪೆ? ಇಂತಹ ಹಲವು ಹೆಣ್ತನದ ಬಯಕೆಗಳನ್ನು ಬಯಸಿದವಳು ಸಿಂಗಾರೆವ್ವ. ಆದರೆ ಗಂಡನು ಈಕೆಯ ಯಾವ ಆಸೆಗಳನ್ನು ನೆರವೇರಿಸುದಿಲ್ಲ. ಒಂದು ಕಡೆ ಮರ್ರ್ಯಾನ ಬಲತ್ಕಾರ, ಒಂದುಕಡೆ ಗಂಡನ ಸ್ತ್ರೀಲಂಪಟತನ ಕಂಡು ಕಣ್ಣೀರು ಹಾಕುತ್ತಾಳೆ. ಸಿಂಗಾರೆವ್ವ ಗಂಡನ ಪ್ರೀತಿ ಬಯಸಿ ಬೆಂದಾದವಳು. ತನ್ನ ಮನೆಯ ಆಳುಮಗ ಹೊಲೆಯನಾದ ಮರ್ರ್ಯಾನು ಅವಳನ್ನು ಪಡೆಯಲು ಹಲವು ಬಾರಿ ಪ್ರಯತ್ನಿಸಿದರು ಅದನ್ನು ತಿರಸ್ಕರಿಸುತ್ತಾಳೆ. ಆದರೆ ಅವನು ಬಲತ್ಕಾರವೆಸಗುತ್ತಾನೆ. ಇದರಿಂದ ಮರ್ರ್ಯಾನನ್ನೆ ವಿಷಕೊಟ್ಟು ಸಾಯಿಸಲು ಪ್ರಯತ್ನಿಸುತ್ತಾಳೆ. ಆದರೆ ಗಂಡನಾದವನು ಯಾವ ಸುಖವನ್ನು ಕೊಡಲೆ ಇಲ್ಲ. ಆದರೆ ಮರ್ರ್ಯಾನ ಹಲವು ಸಾರಿಯ ಅತ್ಯಾಚಾರಕ್ಕೆ ಒಳಗಾದ ಸಿಂಗಾರೆವ್ವಳ ಸ್ತ್ರೀಬಯಕೆಗಳು ಕಾಡತೊಡಗುತ್ತವೆ. ಕೊನೆಗೆ ಮರ್ರ್ಯಾನನ್ನು ಒಪ್ಪಿಕೊಳ್ಳುತ್ತಾಳೆ. ನಂತರ ತಾಯಿಯಾಗುತ್ತಾಳೆ. ಇದನ್ನು ತಿಳಿದ ಗಂಡ ಅವಳನ್ನು 'ಥು ಹಾದರಗಿತ್ತೆ' ಎಂದು ಉಗುಳಿಬಿಟ್ಟ." ಆದರೆ ಇದನ್ನು ಸಹಿಸಿಕೊಳ್ಳದ ಸಿಂಗಾರೆವ್ವ "ಯಾರೋ ಹಾದರಗಿತ್ತಿ? ಗಂಡಿಗ್ಯಾ ಭಾಡ್ಯಾ ಮದಿವ್ಯಾಗಿ ಇಷ್ಟುದಿನಾ ಆಯ್ತು ಒಮ್ಮ್ಯಾದರೂ ನನ್ನ ಹೆಂಡ್ತಿ ಅಂಬೋ ಮಾಯೆ ಮಾಡಿದಿ? ಹೋಗಿ ಸೂಳೇರ ತೊಡಿ ನೋಡಿ ಬೇಹೋಶ್ ಆಗ್ತಿ ಹಾಸಿಗ್ಯಾಗಿನಿ ಹೇಂತಿ ಮರಗತಾಳಂತ ಅಂದಿ? ಹಾದರಗಿತ್ತಿ ನಾ ಅಲ್ಲೊ" "ನಾ ಯಾಕ ಹಾದರಗಿತ್ತಿ ಅದೆ, ಹೆಂಗ ಬಸಿರಾದೆ ಹೆಂಗ ನೀ ಹಾದರ ಮಾಡಕ ಹಚ್ಚಿದೀ, ನೀನು ನಿನ್ನ ರೋಗ ಎರಡೂ ಸೇರಿ ಕುಂಟಲತನ ಮಾಡಿ ಹಾದರ ಮಾಡಕ ನನ್ನ ಹೆಂಗ ದೂಡೀದಿರಿ ಅಂತ ಹೇಳ್ತಿನಿ". ಎಂದು ತನ್ನ ಗಂಡನ್ನ ವಿರುದ್ಧವೆ ಬಂಡಾಯವೇಳುತ್ತಾಳೆ. ಸಂಗಾರೆವ್ವ ಈ ಪ್ರಶ್ನೆಗಳು ಸರಿಯಲ್ಲವೆ?. ಪ್ರೀತಿ ತೋರಿಸಿದರೆ ಸಿಂಗಾರೆವ್ವ ಇಂತಹ ಕೆಲಸಕ್ಕೆ ಕೈಹಾಕುತಿದ್ದಳೆ? ಇಡೀ ಕಾದಂಬರಿಯುದ್ದಕ್ಕೂ ಗಂಭೀರ ವ್ಯಕ್ತಿತ್ವವನ್ನು ಹೊಂದಿದವಳಾಗಿ, ಯಾವುದು ಸ್ತ್ರೀಯರಿಗೆ ನೈತಿಕತೆಯೆಂದು ಹೇಳುವ ಈ ಸಮಾಜದ ಹಾಗೆಯೆ ಬದುಕಲು ಪ್ರಯತ್ನಿಸಿದವಳು. ಆದರೆ ಕೊನೆಗೆ ಸೋಲುವಂತೆ ಮಾಡಿದ್ದು ಗಂಡನ ದೌರ್ಬಲ್ಯವೇ ಹೊರತು ಸಿಂಗಾರೆವ್ವಳ ದೌರ್ಬಲ್ಯದಿಂದಲ್ಲ. ಇವಳಲ್ಲಿ ಯಾವುದೆ ತಪ್ಪಿಲ್ಲದಿದ್ದರೂ ಸಾಮಾಜಿಕವಾಗಿ ಅದು ತಪ್ಪಾಗಿಯೇ ಕಾಣವುದು, ಇದರಿಂದ ತನ್ನ ಸೋಲನ್ನು ಒಪ್ಪಿಕೊಂಡು ಗಂಡನ ಆತ್ಮಹತ್ಯೆಯನ್ನು ತಾನೆ ಕೊಲೆ ಮಾಡಿರುವುದಾಗಿ ಸುಳ್ಳು ಹೇಳಿ ಕಾನೂನಿಗೆ ಶರಣಾಗುತ್ತಾಳೆ. ಅಲ್ಲಿಯೇ ಮರಣ ಹೊಂದುತ್ತಾಳೆ.

ಸಿಂಗಾರೆವ್ವಳ ಜೀವನವನ್ನು ನೋಡಿದರೆ ಹೇಗೆ ಗಂಡಸಿನ ದೌರ್ಬಲ್ಯಗಳು ಹೆಣ್ಣಿನ ಜೀವನವನ್ನೆ ಬಲಿತೆಗೆದುಕೊಳ್ಳುವುದೆಂಬುದು ವ್ಯಕ್ತವಾಗುತ್ತದೆ. ಇಂತಹ ಹಲವು ನೋವನ್ನು ಅನುಭವಿಸುವ ಸ್ತ್ರೀಯರ ತಪ್ಪಾದರು ಏನು? ಬಡತನದಲ್ಲಿ ಹುಟ್ಟಿರುವುದೆ ತಪ್ಪೆ? ಅಥವಾ ಶ್ರೀಮಂತಿಕೆಯಲ್ಲಿ ಹುಟ್ಟಿರುವುದೆ ತಪ್ಪೆ? ಅಥವಾ ಸ್ತ್ರೀ ಬಯಕೆಗಳು ಹೊಂದಿರುವುದೆ ತಪ್ಪೆ? ಅಥವಾ ಹೆಣ್ಣಾಗಿ ಹುಟ್ಟಿರುವುದೆ ತಪ್ಪೆ? ಇದಕ್ಕೆ ಸಮಾಜವೇ ಜವಾಬ್ಧಾರಿಯುತವಾದ ಉತ್ತರವನ್ನು ಕೊಡಬೇಕು.



ಶ್ರೀದೇವಿ, ವಾಯ್, ಎನ್.
ಪಿಎಚ್,ಡಿ ಸಂಶೋಧನಾರ್ಥಿ